# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.07/2022

CW-6/PW-5

| | | |
|---|---|---|
| ಹೆಸರು | ಃ- | ಎ.ನಾಗರಾಜು |
| ತಂದೆ ಹೆಸರು | ಃ- | ಲೇಟ್ ಕೃಷ್ಣಪ್ಪ |
| ವಯಸ್ಸು | ಃ- | 60 ವರ್ಷ |
| ವೃತ್ತಿ | ಃ- | ವ್ಯವಸಾಯ |
| ವಾಸ ಸ್ಥಳ | ಃ- | ರಾಮನಗರ |
| ದಿನಾಂಕ | ಃ- | 12.09.2024 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಸುಮಾರು 3 ವರ್ಷಗಳ ಹಿಂದೆ ಅಂದರೆ 2021 ರಲ್ಲಿ ರಾಮನಗರ ಗ್ರಾಮಾಂತರ ಠಾಣೆಯ ಪೊಲೀಸರು ಚಾಸಾ-1 ರವರ ಚಿನ್ನದ ಸರ ಸುಲಿಗೆಯಾಗಿದ್ದ ಸಮಯದಲ್ಲಿ ನನ್ನನ್ನು ಠಾಣೆಗೆ ಪೊಲೀಸರು ಕರೆಸಿದ್ದರು. ಪೊಲೀಸರು ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರ ಕತ್ತಿನ ಸರವನ್ನು ಸುಲಿಗೆ ಮಾಡಿದ ಇಬ್ಬರು ಆಸಾಮಿಗಳನ್ನು ನನಗೆ ತೋರಿಸಿದರು. ಆ ಆಸಾಮಿಗಳು ಚಾಸಾ-1 ರವರ ಕತ್ತಿನ ಚಿನ್ನದ ಸರವನ್ನು ಹಿಂದುಸ್ತಾನ್ ಗೋಲ್ಡ್ ಕಂಪನಿಯವರಿಗೆ ಮಾರಾಟ ಮಾಡಿದ್ದು, ಅವರು ಬೇರೆಯವರಿಗೆ ಮಾರಾಟ ಮಾಡಿದ್ದರು ಎಂದು ತಿಳಿಯಿತು. ಅದರ ಬದಲಾಗಿ ಹಿಂದುಸ್ತಾನ್ ಗೋಲ್ಡ್ ಕಂಪನಿಯವರು ಚಿನ್ನದ ಗಟ್ಟಿಯನ್ನು ಠಾಣೆಯಲ್ಲಿ ಹಾಜರುಪಡಿಸಿದರು. ಅದನ್ನು ಪೊಲೀಸರು ಜಪ್ತಿ ಮಾಡಿಕೊಂಡರು. ಅದನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯವರಗೆ ಮಹಜರ್ ಮಾಡಿದರು. ಸದರಿ ಮಹಜರನ್ನು ನೋಡಿದರೆ

ಗುರುತಿಸುತ್ತೇನೆ. ಮಹಜರನ್ನು ಈಗ **ನಿಪಿ-6** ಎಂದು ಹಾಗೂ ನನ್ನ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಿರುತ್ತೇನೆ. ಚಿನ್ನದ ಗಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಠಾಣೆಯಲ್ಲಿ ನೋಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿಗಳ ಪರಃ-

ಆರೋಪಿಗಳ ಪರ ವಕೀಲರು ಗೈರು ಹಾಜರಿದ್ದು ಆರೋಪಿಗಳ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.